

ಪುಟ್ಟದೊಂದು ಬಿಲ್ವಪತ್ರೆ ಮರ. ನಾಣುವಿನ ಮನೆಯಷ್ಟು ಎತ್ತರದ ಮರ.

'ಪ್ರತಾಪ'ವಿರುವ ಕೆಲವು ದೈವಗಳ ಹಾಗೂ ತೀರಿಕೊಂಡ ಕಾರಣವರುಗಳ ಪ್ರೇತಗಳ ವಾಸಸ್ಥಳವಂತೆ ಆ ಕಟ್ಟೆ. ಆ ಕಟ್ಟೆಯಲ್ಲಿ ನೆಲೆಗೊಂಡವರೆಲ್ಲ ಉಗ್ರಮೂರ್ತಿಗಳೇ. ಹನುಮಂತನ ಹಾಗೂ ಗಂಧರ್ವನ ಸಾನ್ನಿಧ್ಯವೂ ಅದಕ್ಕಿದೆ ಎಂದು ರಾಮನ್‌ಕಣಿಯಾರ್ ಯಾವುದೋ ಸಂದರ್ಭದಲ್ಲಿ ಹೇಳಿದ್ದಿತ್ತು. ಆ ಕಟ್ಟೆಯ ಅದೃಶ್ಯ ಶಕ್ತಿಗಳೇ ನಾಣು ಮತ್ತವನ ಕುಟುಂಬವನ್ನು ಸಂರಕ್ಷಿಸುತ್ತಿವೆ ಎಂದೇ ಹಲವರು ಹೇಳುವುದು.

ಎರಡು ಹೊತ್ತು ಲಕ್ಷ್ಮಿ ಮತ್ತು ಮಕ್ಕಳು ಅಲ್ಲಿ ನಿಂತು ಪ್ರಾರ್ಥನೆ ಮಾಡಬೇಕೆಂಬುದು ನಾಣುವಿನ ಆಜ್ಞೆ... ಆ ಕಟ್ಟೆಯ ಮೇಲೆ ಅಶುದ್ಧವಾದವರು ಯಾರೂ ಹತ್ತಬಾರದು. ನಾಣುವಿನ ಆಜ್ಞೆಗಳನ್ನು ಪಾಲಿಸದಿರಲು ಯಾರಿಗೂ ಸಾಧ್ಯವಿಲ್ಲ.

ಮಳೆಯಾದರೂ ಚಳಿಯಾದರೂ ನಾಣು ಬೆಳ್ಳಂಬೆಳಗ್ಗೆ ಎದ್ದೇಳುವನು. ತೊರೆಗೆ ಹೋಗಿ